



# ಮರ ಚಿತ್ರಕಲೆ!

ದೇವಾಲಯದ ಮರದ ಕಂಬಗಳ ಮೇಲೆ ಮೂರ್ತಿ ಕಡೆದು, ರಮ್ಯತೆಗಾಗಿ ಅವುಗಳ ಮೇಲೆ ಬಣ್ಣ ಹಾಕುವುದು ಪ್ರಾಚೀನ ಕಲೆ. ಆದರೆ ಈಗ ಅರಣ್ಯದಲ್ಲಿನ ಮರದ ಕಾಂಡ ಮತ್ತು ಸೀಳಿದ, ಹಾಳಾದ ಭಾಗದ ಮೇಲೆ ಬಣ್ಣ ಬಳಸಿ ಚಿತ್ರ ಮೂಡಿಸುವುದು ಸಾಮಾನ್ಯವಾಗುತ್ತಿದೆ. ಇದಕ್ಕೆ ಮರ ಚಿತ್ರ ಕಲೆ, ಮರ ಲೇಪನ, ಮರ ಗಾಯಕ್ಕೆ ಡ್ರೆಸ್ಸಿಂಗ್ ಎಂಬ ಹೆಸರುಗಳಿವೆ. ದಕ್ಕಾಗಿ ಟ್ರೀ ಗಾರ್ಡ್ ಪೈಂಟ್ಸ್ ಎಂಬ ವಿಶೇಷ ಬಣ್ಣಗಳಿವೆ, ಹಾಳಾಗುತ್ತಿರುವ ಭಾಗಕ್ಕೆ ಮೂರು ದಿನದೊಳಗೆ ಲೇಪನ ಮಾಡುವುದರಿಂದ ಕೆಡುವುದನ್ನು ನಿಯಂತ್ರಿಸಬಹುದು. ಈ ಕಲೆಗಾಗಿ ಸ್ಪ್ರೇ, ಪೆಂಟಗನ್ ಬ್ರಷ್ ಸೂಕ್ತ. ಶೇ.50ರಷ್ಟು ದ್ರವೀಕರಿಸಿದರೆ ಹೆಚ್ಚು ಆಕರ್ಷಕ ಮತ್ತು ಪರಿಣಾಮಕಾರಿ.

ಇಂಥ ಚಿತ್ರಕಲೆಯಿಂದ ಬೇರೆ ಹಲವಾರು ಪ್ರಯೋಜನಗಳಿವೆ. ಮೊಲ, ಇಲಿ, ಹೆಗ್ಗಣ, ಮರ ಕೊರೆಯುವ ಹುಳದಿಂದ ಮರದ ರಕ್ಷಣೆ ಇದೆ. ಅತೀ ಬಿಸಿಲು, ಚಳಿಯಿಂದ ಮರದ ತೊಗಟೆ, ಕಾಂಡದಲ್ಲಿನ ಬಿರುಕನ್ನು ತಡೆಯಬಹುದು.

ಅರಣ್ಯದಲ್ಲಿನ ಈ ಮರ ಚಿತ್ರಕಲೆ ಮಡಿಕೇರಿ ಸಮೀಪದ ಕಾವೇರಿ ನಿಸರ್ಗ ಧಾಮದಲ್ಲಿ ಸೆರೆಹಿಡಿಯಲಾಗಿದೆ.

■ **ಚಿತ್ರ- ಬರಹ: ಡಾ.ಎಂ.ಡಿ.ಸೂರ್ಯಕಾಂತ**

